ಜೈನಪುರಾಣಗಳಲ್ಲಿ ರಾಮ ಅಹಿಂಸಾವಾದಿ; ಆತ ಯಾರನ್ನೂ ಕೊಲ್ಲುವುದಿಲ್ಲ; ರಾವಣನನ್ನು ಲಕ್ಷ್ಮಣ ಕೊಲ್ಲುತ್ತಾನೆ. ಇದು ಜೈನಪುರಾಣಗಳಲ್ಲಿನ ಒಂದು ಸಿದ್ಧಮಾದರಿ. ಅಲ್ಲಿ ನಾಯಕ (ವಾಸುದೇವ) ಪ್ರತಿನಾಯಕ (ಪ್ರತಿವಾಸುದೇವ) ಹೋರಾಡುವುದು ವಿಧಿ ನಿಯಮ ಎನಿಸುತ್ತದೆ. ಬಲದೇವ ಎನಿಸಿಕೊಂಡ ರಾಮ ತಟಸ್ಥನಾಗಿ ಅಹಿಂಸಾಮಾರ್ಗವನ್ನು ಅನುಸರಿಸುತ್ತಾನೆ. ಈ ಬಗೆಯ ಪರಿವರ್ತನೆ ನಾಗಚಂದ್ರನಿಗೆ ಸಾಧ್ಯವಾದದ್ದು ಅವನ ಕಾಲಸಂದರ್ಭದ ಒತ್ತಾಸೆಯಿಂದಲೇ ಎನ್ನಬೇಕಾಗುತ್ತದೆ. ತನ್ನ ಧರ್ಮವನ್ನು ಉನ್ನತೀಕರಿಸುವ ಅನಿವಾರ್ಯತೆಯಿಂದಾಗಿ ಆತ ಈಗಾಗಲೇ ಆದರ್ಶೀಕರಣಗೊಂಡಿದ್ದ ರಾಮಕಥೆಯನ್ನು ನವೀಕರಿಸಿದ್ದಾನೆ. ಆದ್ದರಿಂದ 'ರಾಮಚಂದ್ರಚರಿತ ಪುರಾಣ' ಚರಿತ್ರೆ, ಪುರಾಣಗಳೆರಡರ ಲಕ್ಷಣಗಳನ್ನು ಒಳಗೊಂಡಿದೆ.

ನಾಗಚಂದ್ರ ತನ್ನನ್ನು 'ಅಭಿನವ ಪಂಪ' ಎಂದು ಕರೆದುಕೊಂಡಿದ್ದಾನೆ. ಹನ್ನೆರಡನೆಯ ಶತಮಾನದ ಆದಿಯಲ್ಲಿದ್ದ (ಕ್ರಿ.ಶ. 1040–1100) ಈತ, ಹೊಯ್ಸಳ ಒಂದನೆಯ ಬಲ್ಲಾಳನ ಆಸ್ಥಾನದಲ್ಲಿದ್ದನೆಂದು ಹೇಳಲಾಗಿದೆ. ಅವನ ಜನ್ಮ ಸ್ಥಳ ವಿಜಯಪುರ; ಜೈನ ಧರ್ಮದಲ್ಲಿ ನಿಷ್ಠೆಯುಳ್ಳವನಾಗಿದ್ದ ಅವನು ಮಲ್ಲಿನಾಥ ಬಸದಿಯನ್ನು ಕಟ್ಟಿಸಿದನು. 'ಮಲ್ಲಿನಾಥ ಪುರಾಣ', 'ರಾಮಚಂದ್ರಚರಿತ ಪುರಾಣಂ' (ಪಂಪರಾಮಾಯಣ) ಅವನ ಪ್ರಸಿದ್ಧ ಕೃತಿಗಳು; ಅವೆರಡೂ ಆಗಮಿಕ ಗ್ರಂಥಗಳು. ಪಂಪನ ನಿರೂಪಣಾ ಗಾಂಭೀರ್ಯವನ್ನು ಅನುಸರಿಸಿದ್ದರೂ 'ಮೃದುವೆನೆ ಪೊಸಬಗೆ ರಸಭಾವದೊಳೋಕುಳಿಯಾಡೆ ಪೇೞ್ದನಭಿನವಪಂಪಂ' ಎಂದು ಹೇಳಿದ್ದಾನೆ. ಮುಖ್ಯವಾಗಿ ಕಥೆ, ಪಾತ್ರ, ರಸದ ಕಡೆಗೆ ಒಲವುಳ್ಳ ನಾಗಚಂದ್ರನ ಶೈಲಿ ಸುಭಗ, ಲಲಿತರೂಪದ್ದು; ಕ್ಲಿಷ್ಟತೆಯ ಪ್ರಮಾಣ ಕಡಿಮೆ. ಆತನ ಕಾವ್ಯದಲ್ಲಿ ಔಚಿತ್ಯಪೂರ್ಣವಾದ ಕವಿ ಪ್ರತಿಭೆ, ಆಳವಾದ ಜೀವನ ದೃಷ್ಟಿ, ಮಾನವೀಯ ಮೌಲ್ಯ, ಭಾವ ಸಾಂದ್ರವುಳ್ಳ ಕಾವ್ಯಾಭಿವ್ಯಕ್ತಿಯನ್ನು ಕಾಣಬಹುದು. ಈ ಕಾರಣದಿಂದಾಗಿ ಕೆಲವು ಕಡೆ ಪ್ರಾಸಂಗಿಕವಾಗಿ ನುಸುಳಿರುವ ಆಭಾಸ, ಲೋಪ, ಪರಿಮಿತಿಗಳು ಹಿಂದೆ ಸರಿದು; ಕಾವ್ಯದ ವಸ್ತು ವಿನ್ಯಾಸ, ನಿರೂಪಣೆ ಮತ್ತು ಸನ್ನಿವೇಶ ನಿರ್ಮಾಣ ಪ್ರತಿಭೆ ಮುಖ್ಯವೆನಿಸುತ್ತದೆ.



## ಕುಮಾರಚಲ್ಯ

ಕುಮಾರಚಲ್ಯ ಎಂಬ ಕಾವ್ಯನಾಮದಲ್ಲಿ ಬರೆಯುವ ಕವಿ, ವಿಮರ್ಶಕ, ಸಂಶೋಧಕ ಸಿ.ಎಸ್. ಶಿವಕುಮಾರಸ್ವಾಮಿ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿ ನಿವೃತ್ತರು. 20ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಅವರ ಪ್ರಾತಿನಿಧಿಕ ಪುಸ್ತಕಗಳು: 'ನವಾಬ, ಗುಲಾಬಿ ಮತ್ತು ಪಾರಿವಾಳ' (ಕವನ ಸಂಕಲನ), ''ಕಾಲಮಾನ', 'ಅಭಿಜ್ಞಾನ' (ವಿಮರ್ಶೆ), 'ಬೇರು ತೋರಿದ ಹಾದಿ' (ಜಾನಪದ), 'ಹಿಂದಣಹೆಜ್ಜೆಯನರಿಯದೆ...' (ಸಂಶೋಧನೆ). 'ದೇವುಡು ಅವರ ಸೃಜನಶೀಲ ಸಾಹಿತ್ಯ' ಅವರ ಸಂಶೋಧನಾ ಪ್ರಬಂಧವಾಗಿದೆ. ಕುಮಾರಚಲ್ಯ ಮೂಲತಃ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಚಲ್ಯ ಗ್ರಾಮದವರು.